Ref.No. 80/2023

MW-1,

ದಿನಾಂಕಃ 09-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಎಂ ಎಸ್ ವಿ ವಕೀಲರಿಂದಃ

ದಿನಾಂಕ 07.04.2021 ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ (ರಿ) ಇವರು ನೀಡಿದಂತಹ ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ಭಾಗವಹಿಸಲು ಕರೆ ಕೊಟ್ಟಿದ್ದು ಸದರಿ ಕೂಟದಲ್ಲಿ ನೀವು ಸದಸ್ಯರಾಗಿದ್ದು ಸಂಸ್ಥೆ ಯಲ್ಲಿ ನಿಷ್ಟೆಯಿಂದ ಕಾರ್ಯ ನಿರ್ವಹಿಸುತ್ತಿದ್ದ ನೌಕಕರಿಗೆ ಕರೆ ಪತ್ರವನ್ನು ವಿತರಿಸಿ ಹಾಗೂ ಸಾಮಾಜಿಕ ಜಾಲತಾಣಗಳಾದ ವ್ಯಾಟ್ಸ್ ಅಪ್ ಮತ್ತು ಪೇಸ್ ಬುಕ್ ನಲ್ಲಿ ಮುಷ್ಕರದಲ್ಲಿ ಪಾಲ್ಗೊಳ್ಳುವಂತೆ ಸಂಸ್ಥೆಯ ನೌಕರರ ಕಾರ್ಯ ನಿರ್ವಹಣೆಗೆ ಅಡ್ಡಿ ಉಂಟು ಮಾಡಿ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಒದಗಿಸಲು ತೊಂದರೆ ಉಂಟುಮಾಡಿರುತ್ತೇನೆ ಎಂದರೆ ಸರಿಯಲ್ಲ . ಇದಕ್ಕೆ ಸಂಬಂಧಿಸಿದಂತೆ 2 ನೇ ಪಾರ್ಟಿ ಸಂಸ್ಥೆ ಯವರು ಮಳವಳ್ಳಿ ಟೌನ್ ಪೋಲಿಸ್ ಠಾಣೆಯಲ್ಲಿ ನನ್ನ ಮತ್ತು ಇತರರ ಮೇಲೆ ದೂರು ದಾಖಲಿಸಿರುತ್ತಾರೆ ಎಂದರೆ ಸರಿ . ದಿನಾಂಕ 07.04.2021 ರ ನಂತರ ನಾನು ಸತತವಾಗಿ ಕೆಲಸಕ್ಕೆ ಗೈರು ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ರಜೆ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ . ರಜೆ ಅರ್ಜಿಗೆ ಸಂಬಂಧಸಿದಂತೆ ಯಾವುದೇ ದಾಖಲಾತಿಗಳನ್ನು ನಾನು ಈ ನ್ಯಾಯಾಧೀಕರಣದ ಮುಂದೆ ಸಲ್ಲಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ರಜೆ ಅರ್ಜಿ ಯನ್ನು ಸ್ವೀಕರಿಸಿದ ಬಗ್ಗೆ acknowledgment ಅನ್ನು 2 ನೇ ಪಾರ್ಟಿ ಸಂಸ್ಥೆ ಯವರು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ರಜೆ ಅರ್ಜಿ ಯನ್ನು register post ಮೂಲಕ ಸಲ್ಲಿಸಿರುವುದಿಲ್ಲ ಎಂದರೆ ಸರಿ . ನಾನು ರಜೆ ಅರ್ಜಿ ಸಲ್ಲಿಸಿಲ್ಲದ್ದಿರೂ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .ನನ್ನ ಅಣ್ಣನಿಗೆ ಹುಷಾರಿಲ್ಲದೇ ಇದ್ದುದರಿಂದ ನಾನು ರಜೆಯನ್ನು ಹಾಕಿರುತ್ತೇನೆ. ನನ್ನ ಅಣ್ಣನಿಗೆ ಸಂಬಂಧಿಸಿದ ಮೆಡಿಕಲ್ ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಸಲ್ಲಿಸಿರುವುದಿಲ್ಲ ಎಂದರೆ ಸರಿ . ದಿನಾಂಕ 07.04.2021 ನಾನು ಮುಷ್ಕರದಲ್ಲಿ ತೊಡಗಲೆಂದು ಕೆಲಸಕ್ಕೆ ಗೈರು ಹಾಜರಾಗಿದ್ದೆ ಎಂದರೆ ಸರಿಯಲ್ಲ . ನಾನು ಸದರಿ ಅವಧಿಯಲ್ಲಿ ಬೇರೆ ನೌಕಕರನ್ನು ಮುಷ್ಕರದಲ್ಲಿ ಪಾಲ್ಗೊಳ್ಳಲು ಉತ್ತೇಜಿಸುತ್ತಿದೆ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಸಂಸ್ಥೆ ಯವರು 69 ಪ್ರಕರಣಗಳಲ್ಲಿ ನನಗೆ ಲಘು ಶಿಕ್ಷೆಯನ್ನು ವಿಧಿಸಿರುತ್ತಾರೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯವರು ನನಗೆ ನೀಡಿದಂತಹ ಶಿಕ್ಷೆಯು ಕಾನೂನುಬದ್ಧವಾಗಿರುತ್ತದೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ
(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.